# ಬೃಹತ್ ಸಾರ್ವಜನಿಕ ಕಾಮಗಾರಿ ಸ್ಥಾಯಿ ಸಮಿತಿ ಹಾಗೂ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಸಭೆಯ ಅಧಿಕಾರಗಳನ್ನು ಚಲಾಯಿಸಿ ಆಡಳಿತಗಾರರ ದಿನಾಂಕ:08-06-2015ರ ನಡವಳಿಗಳು

## ವಿಷಯದ ಸಂಖ್ಯೆ : 74 / 2015-16

ವಿಷಯ: ದಿನಾಂಕ:23-04-2015, 27-04-2015 ಮತ್ತು 31-05-2015 ರಂದು ಬೆಂಗಳೂರು ನಗರ ವ್ಯಾಪ್ತಿಯಲ್ಲಿ ಬಿದ್ದ ಭಾರಿ ಮಳೆಯಿಂದಾಗಿ ಬೃಹತ್ ಮಳೆ ನೀರುಗಾಲುವೆಗಳಲ್ಲಿ ಪ್ರವಾಹದಿಂದುಂಟಾದ ಅನಾಹುತಗಳ ಬಗೆಗಿನ ವಿವರಗಳ ವರದಿ ಮತ್ತು ಪ್ರಸ್ತಾವನೆಗಳಿಗೆ ಆಡಳಿತಾತ್ಮಕ ಮಂಜೂರಾತಿ ನೀಡುವ ಕುರಿತು.

**ಪ್ರಸ್ತಾವನೆ:**

ಟಿಪ್ಪಣಿಯಲ್ಲಿ ವಿವರಿಸಿರುವಂತೆ, ದಿನಾಂಕ:23-04-2015, 27-04-2015 ಮತ್ತು 31-05-2015 ರಂದು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ಬಿದ್ದ ಮಳೆಯಿಂದಾಗಿ ಬೃಹತ್ ಮಳೆ ನೀರುಗಾಲುವೆಯ ತಡೆಗೋಡೆಗಳು, ರಕ್ಷಣೆಗಾಗಿ ನಿರ್ಮಿಸಿದ್ದ ತಂತಿ ಬೇಲಿಗಳು ಕೊಚ್ಚಿಹೋಗಿರುತ್ತವೆ ಹಾಗೂ ಹಲವಾರು ಕಡೆಗಳಲ್ಲಿ Sufficient vent size ಇಲ್ಲದ ಕಾರಣ ಕಸ ಕಡ್ಡಿಗಳು ಕಟ್ಟಿಕೊಂಡು ಪ್ರವಾಹದ ನೀರು ಸರಿಯಾಗಿ ರಾಜಕಾಲುವೆಯಲ್ಲಿ ಹರಿಯದೆ ಹಿನ್ನೀರಿನಿಂದ ಪ್ರವಾಹ ಉಂಟಾಗಿರುತ್ತದೆ.

ಇನ್ನೂ ಕೆಲವು ಕಡೆ Lead off drain ಇಲ್ಲದೆ ಇರುವ ಕಾರಣ ಪ್ರವಾಹ ಉಂಟಾಗಿ ಸಾರ್ವಜನಿಕರ ಆಸ್ತಿಪಾಸ್ತಿಗಳಿಗೆ ಹಾಗೂ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಚರಂಡಿ ಹಾಗೂ ರಸ್ತೆಗಳಿಗೆ ಅಲ್ಪ ಪ್ರಮಾಣದಲ್ಲಿ ಹಾನಿ ಉಂಟಾಗಿರುತ್ತದೆ. ಈ ಹಾನಿಗೊಳಗಾಗಿರುವ ತಡೆಗೋಡೆಗಳು, ತಂತಿ ಬೇಲಿ ಹಾಗೂ ಇನ್ನಿತರೆ ಕಾರ್ಯವನ್ನು ಸಾರ್ವಜನಿಕ ಹಿತದೃಷ್ಟಿಯಿಂದ ಮುಂದೆ ಆಗಬಹುದಾದ ಅನಾಹುತಗಳನ್ನು ತಡೆಗಟ್ಟಲು ಅತ್ಯಾವಶ್ಯಕವಾಗಿ ತುರ್ತಾಗಿ ಕೈಗೊಳ್ಳಬೇಕಾಗಿರುತ್ತದೆ.

ಈ ಹಿನ್ನಲೆಯಲ್ಲಿ ಮಹಾನಗರ ಪಾಲಿಕೆಯ ಬೃಹತ್ ಮಳೆನೀರುಗಾಲುವೆಯ ಎಲ್ಲಾ ವಲಯಗಳ ಸಂಬಂಧಪಟ್ಟ ಅಭಿಯಂತರರುಗಳು ಸ್ಥಳ ಪರಿವೀಕ್ಷಣೆ ನಡೆಸಿ, ಸದರಿ ದಿನಾಂಕದಂದು ಮಳೆಯ ಹಾನಿಗೊಳಗಾಗಿರುವ ಸ್ಥಳಗಳನ್ನು ಗುರುತಿಸಿ, ಆ ಸ್ಥಳಗಳಲ್ಲಿ ಕೈಗೊಳ್ಳಬೇಕಾಗಿರುವ ಅಗತ್ಯವಾದ ತುರ್ತು ಕಾಮಗಾರಿಗಳ ಅಂದಾಜು ಪಟ್ಟಿಗಳನ್ನು ತಯಾರಿಸಿದ್ದು, ಕಾಮಗಾರಿಗಳ ವಲಯವಾರು ಘೋಷ್ವಾರೆ ವಿವರಗಳು ಕೆಳಕಂಡಂತಿವೆ.

| ಘೋಷ್ವಾರೆ | | | |
|---|---|---|---|
| ಕ್ರ ಸಂ. | ವಲಯ / ಕಣಿವೆ | ಕಾಮಗಾರಿಗಳ ಸಂಖ್ಯೆ | ಅಂದಾಜು ಮೊತ್ತ ರೂ. ಲಕ್ಷಗಳಲ್ಲಿ |
| 1 | ಪೂರ್ವ | 8 | 275.00 |
| 2 | ಕೋರಮಂಗಲ | 5 | 164.00 |
| 3 | ದಕ್ಷಿಣ | 8 | 170.00 |
| 4 | ಪಶ್ಚಿಮ | 18 | 1001.55 |
| 5 | ಯಲಹಂಕ | 0 | 0.00 |
| 6 | ಮಹದೇವಪುರ | 1 | 70.00 |
| 7 | ಬೊಮ್ಮನಹಳ್ಳಿ | 0 | 0.00 |
| 8 | ರಾಜರಾಜೇಶ್ವರಿನಗರ | 6 | 135.00 |
| 9 | ದಾಸರಹಳ್ಳಿ | 1 | 70.00 |
| **ಒಟ್ಟು** | | **47** | **1885.55** |
| | | | **18.86 ಕೋಟಿ** |

ಮೇಲ್ಕಂಡ ಅಂಶಗಳ ಹಿನ್ನಲೆಯಲ್ಲಿ, ಪ್ರವಾಹದಿಂದಾಗಿ ಹಾನಿಗೊಳಗಾಗಿರುವ ಮೇಲೆ ನಮೂದಿಸಿರುವ 47 ಸ್ಥಳಗಳಿಗೆ ಅನ್ವಯವಾಗುವಂತೆ ರೂ.1885.55 ಲಕ್ಷಗಳ ವೆಚ್ಚದಲ್ಲಿ ರಾಜಕಾಲುವೆಗಳನ್ನು ಪುನರ್ ನಿರ್ಮಾಣ ಮಾಡಲು ಆಡಳಿತಾತ್ಮಕ ಅನುಮೋದನೆ ಕೋರಲಾಗಿದೆ. ಈ ಕಾಮಗಾರಿಗಳನ್ನು ರಾಜ್ಯ ಸರ್ಕಾರದ ಅನುದಾನದಡಿಯಲ್ಲಿ ಕೈಗೆತ್ತಿಕೊಳ್ಳಲಾಗಿದ್ದು, ಈ ಕಾಮಗಾರಿಗಳನ್ನು ಅತಿ ಜರೂರೆಂದು ಪರಿಗಣಿಸಿ ಅಲ್ಪಾವಧಿ ಟೆಂಡರ್ ಕರೆದು ಕೂಡಲೇ ಕ್ರಮಕೈಗೊಳ್ಳುವ ಬಗ್ಗೆ ಅನುಮೋದನೆ ಕೋರಿ ಮಾನ್ಯ ಆಡಳಿತಗಾರರ ಮುಂದೆ ಮಂಡಿಸಿರುವ ಆಯುಕ್ತರವರ ದಿನಾಂಕ:04-06-2015ರ ಟಿಪ್ಪಣಿ.

**ತೀರ್ಮಾನ:** **"ರಾಜ್ಯ ಸರ್ಕಾರದ ಅನುದಾನದಡಿ ನಗರೋತ್ಥಾನ ಯೋಜನೆಯಡಿ ಕೈಗೆತ್ತಿಕೊಳ್ಳಲು ಅನುಮೋದಿಸಿದೆ".**

**(ಟಿ.ಎಂ.ವಿಜಯಭಾಸ್ಕರ್)**
ಆಡಳಿತಗಾರರು